# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 696 |
| ಸದಸ್ಯರ ಹೆಸರು | : | ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವವರು | : | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕ ಸಬಲೀಕರಣ ಇಲಾಖಾ ಸಚಿವರು. |
| ಉತ್ತರಿಸಬೇಕಾದ ದಿನಾಂಕ | : | 12.12.2025. |

*****

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಅನಾಥ ಮಕ್ಕಳ ಸಂಖ್ಯೆ ಎಷ್ಟು; ಅದರಲ್ಲಿ 5 ವರ್ಷದ ಒಳಗಿನ ಮಕ್ಕಳ ಸಂಖ್ಯೆ ಎಷ್ಟು 5 ರಿಂದ 10 ವರ್ಷದ ಒಳಗಿನ ಮಕ್ಕಳ ಸಂಖ್ಯೆ ಎಷ್ಟು; 10 ರಿಂದ 15 ವರ್ಷದ ಒಳಗಿನ ಮಕ್ಕಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು) | ಮಕ್ಕಳ ರಕ್ಷಣಾ ನಿರ್ದೇಶನಾಲಯದ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮಕ್ಕಳ ಪಾಲನಾ ಸಂಸ್ಥೆಗಳಲ್ಲಿ **5 ವರ್ಷದ ಒಳಗಿನ 25 ಮಕ್ಕಳು, 5-10 ವರ್ಷದ 76 ಮಕ್ಕಳು ಹಾಗೂ 10-15 ವರ್ಷದ 199** ಅನಾಥ ಮಕ್ಕಳು ದಾಖಲಾಗಿರುತ್ತಾರೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ 1 ರಲ್ಲಿ ಲಗತ್ತಿಸಿದೆ).** |
| ಆ) | ಕಳೆದ ಎರಡು ವರ್ಷಗಳಲ್ಲಿ ಎಷ್ಟು ಅನಾಥ ಮಕ್ಕಳನ್ನು ದತ್ತುಗೆ ನೀಡಲಾಗಿದೆ: ಎಷ್ಟು ಹೆಣ್ಣು ಮಕ್ಕಳ ಮದುವೆ ಮಾಡಲಾಗಿದೆ: (ವಿವರ ನೀಡುವುದು) | ಕಳೆದ ಎರಡು ವರ್ಷಗಳಲ್ಲಿ **44** ಅನಾಥ ಮಕ್ಕಳನ್ನು ದತ್ತುಗೆ ನೀಡಲಾಗಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-2 ರಲ್ಲಿ ನೀಡಲಾಗಿದೆ.**<br><br>ಅನೈತಿಕ ವ್ಯವಹಾರಗಳ ತಡೆಗಟ್ಟುವಿಕೆ ಅಧಿನಿಯಮ 1956 ರ ಅಡಿಯಲ್ಲಿ ರಾಜ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ನಾಲ್ಕು ಸ್ವೀಕಾರ ಕೇಂದ್ರಗಳು ಮತ್ತು 8 ರಾಜ್ಯ ಮಹಿಳಾ ನಿಲಯಗಳು ಕಾರ್ಯನಿರ್ವಹಿಸುತ್ತಿವೆ. ಈ ಸಂಸ್ಥೆಗಳಲ್ಲಿ ದಾಖಲಾಗಿ ಆಶ್ರಯ ಪಡೆದ 38 ಮಹಿಳಾ ನಿವಾಸಿಗಳಿಗೆ ಕಳೆದ 2 ವರ್ಷಗಳಲ್ಲಿ 18 ವರ್ಷ ತುಂಬಿದ ಅನಾಥ ಹೆಣ್ಣು ಮಕ್ಕಳ ವಿವಾಹವನ್ನು ಮಾಡಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ. |

| ವರ್ಷ | ವಿವಾಹ ಮಾಡಲಾದ ಮಹಿಳೆಯರ ಸಂಖ್ಯೆ |
|---|---|
| 2023-24 | 13 |
| 2024-25 | 20 |
| 2025-26 | 5 |
| **ಒಟ್ಟು** | **38** |

| | | |
|---|---|---|
| ಇ) | ಅನಾಥ ಮಕ್ಕಳಿಗೆ ವಿದ್ಯಾಭ್ಯಾಸ ಹಾಗೂ ಉದ್ಯೋಗದಲ್ಲಿ ಮೀಸಲಾತಿ ನೀಡಲಾಗುತ್ತಿದೆಯೇ; ಮೀಸಲಾತಿ ನೀಡುವ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | ಸರ್ಕಾರಿ ಪಾಲನಾ ಸಂಸ್ಥೆಗಳಲ್ಲಿ ದಾಖಲಾಗುವ ಅನಾಥ ಮಕ್ಕಳಿಗೆ ಸಮೀಪದ ಸರ್ಕಾರಿ ಶಾಲೆ/ ಕಾಲೇಜುಗಳಿಗೆ ದಾಖಲಿಸಿ ವಿದ್ಯಾಭ್ಯಾಸ ನೀಡಲಾಗುತ್ತಿದೆ.<br><br>ಮುಂದುವರೆದು , ಸಂಸ್ಥೆಯಲ್ಲಿ ದಾಖಲಾಗುವ ಅನಾಥ ಮಕ್ಕಳಿಗೆ ಯಾವುದೇ ಜಾತಿ ಪುರಾವೆ ಇರುವುದಿಲ್ಲ.<br><br>ಈ ನಿಟ್ಟಿನಲ್ಲಿ ಮಾನ್ಯ ಸರ್ಕಾರದ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:08.10.2024 ರಂದು ನಡೆದ ರಾಜ್ಯ ಮಟ್ಟದ ಮಕ್ಕಳ ಕಲ್ಯಾಣ ಮತ್ತು ರಕ್ಷಣಾ ಸಮಿತಿ ಸಭೆಯಲ್ಲಿ ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಚರ್ಚಿಸಲಾಗಿದ್ದು, ಈ ಕುರಿತು ಎಸ್.ಸಿ/ಎಸ್.ಟಿ/ ಹಿಂದುಳಿದ ವರ್ಗಗಳಿಗೆ ಸರ್ಕಾರದಿಂದ ಲಭ್ಯವಿರುವ ಎಲ್ಲಾ ವಿಶೇಷ ಸೌಲಭ್ಯಗಳನ್ನು ಪಾಲನಾ ಸಂಸ್ಥೆಗಳ ಮಕ್ಕಳಿಗೂ ವಿಸ್ತರಿಸಲು ಅನುಮೋದನೆ ನೀಡುವಂತೆ ಸಮಾಜ ಕಲ್ಯಾಣ ಇಲಾಖೆಗೆ ಕೋರಲಾಗಿತ್ತು. ಸಮಾಜ ಕಲ್ಯಾಣ ಇಲಾಖೆಯು ಮಕ್ಕಳ ಪಾಲನಾ ಸಂಸ್ಥೆಗಳ ಮಕ್ಕಳಿಗೆ (ಅನಾಥ, ನಿರ್ಗತಿಕ ಮತ್ತು ಒಪ್ಪಿಸಲ್ಪಟ್ಟ) ಎಸ್.ಸಿ/ ಎಸ್.ಟಿ ಮಕ್ಕಳಿಗೆ ಸಿಗುವ ಸೌಲಭ್ಯಗಳ ವಿಸ್ತರಿಸುವ ಪ್ರಸ್ತಾವನೆಯನ್ನು ಒಪ್ಪಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ.<br><br>ಮುಂದುವರೆದಂತೆ, ಇಲಾಖಾ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಮಕ್ಕಳ ಪಾಲನಾ ಸಂಸ್ಥೆಗಳ ಮಕ್ಕಳಿಗೆ ಜಾತಿ ಪ್ರಮಾಣ ಪತ್ರ ಒದಗಿಸುವ ಕುರಿತು ದಿನಾಂಕ:17.09.2025 ರಂದು ನಡೆದ ಸಭೆಯಲ್ಲಿ<br><br>ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಪ್ರತಿನಿಧಿಗಳು ಅನಾಥ ಮತ್ತು ನಿರ್ಗತಿಕ ಮಕ್ಕಳಿಗೆ ಶೇ.1 ರಷ್ಟು ಮೀಸಲಾತಿಯನ್ನು ಕಲ್ಪಿಸಿ, ಪ್ರವರ್ಗ 1ರಡಿ ಸೇರ್ಪಡೆಗೊಳಿಸಲು ಹಿಂದುಳಿದ ವರ್ಗಗಳ ಆಯೋಗದ ವತಿಯಿಂದ ಪರಿಶೀಲನೆ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ.<br><br>ಈ ಕುರಿತು, ಪ್ರಸ್ತಾವನೆಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |

**ಸಂಖ್ಯೆ:** ಮಮಇ 179 ಮಭಾಬ 2025

**(ಲಕ್ಷ್ಮೀ ಆರ್. ಹೆಬ್ಬಾಳ್ಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಇಲಾಖಾ ಸಚಿವರು.

## ಅನುಬಂಧ – I

| ಕ್ರ.ಸಂ | ಜಿಲ್ಲೆಯ ಹೆಸರು | ಮಕ್ಕಳ ಸಂಖ್ಯೆ | |
|---|---|---|---|
| | | 05 ರಿಂದ 10 ವರ್ಷಗಳ ಅನಾಥ ಮಕ್ಕಳು ಒಟ್ಟು | 10 ರಿಂದ 15 ವರ್ಷಗಳ ಅನಾಥ ಮಕ್ಕಳುಒಟ್ಟು |
| **1** | **2** | **3** | **4** |
| 1 | ಬಾಗಲಕೋಟೆ | 0 | 1 |
| 2 | ಬೆಂಗಳೂರು ನಗರ | 1 | 2 |
| 3 | ಬೆಂಗಳೂರು ಉತ್ತರ | 5 | 23 |
| 4 | ಬೆಂಗಳೂರು ದಕ್ಷಿಣ | 0 | 4 |
| 5 | ಬೆಂಗಳೂರು ಪೂರ್ವ | 0 | 0 |
| 6 | ಬೆಂಗಳೂರು ಪಶ್ಚಿಮ | 5 | 10 |
| 7 | ಬೆಂಗಳೂರು (ಗ್ರಾ) | 3 | 3 |
| 8 | ಬೆಳಗಾವಿ | 7 | 19 |
| 9 | ಬಳ್ಳಾರಿ | 3 | 14 |
| 10 | ಬೀದರ್ | 1 | 9 |
| 11 | ಚಿಕ್ಕಬಳ್ಳಾಪುರ | 0 | 3 |
| 12 | ಚಿಕ್ಕಮಂಗಳೂರು | 5 | 12 |
| 13 | ವಿಜಯಪುರ | 2 | 3 |
| 14 | ಚಾಮರಾಜನಗರ | 1 | 8 |
| 15 | ಚಿತ್ರದುರ್ಗ | 3 | 2 |
| 16 | ದಾವಣಗೆರೆ | 3 | 18 |
| 17 | ಧಾರವಾಡ | 3 | 8 |
| 18 | ಗದಗ | 0 | 0 |
| 19 | ಕಲಬುರಗಿ | 0 | 13 |
| 20 | ಹಾಸನ | 6 | 1 |
| 21 | ಹಾವೇರಿ | 0 | 8 |
| 22 | ಉತ್ತರ ಕನ್ನಡ | 0 | 0 |
| 23 | ಕೊಡಗು | 0 | 2 |
| 24 | ಕೋಲಾರ | 0 | 3 |
| 25 | ಕೊಪ್ಪಳ | 2 | 1 |
| 26 | ಮಂಡ್ಯ | 1 | 3 |
| 27 | ದಕ್ಷಿಣಕನ್ನಡ | 2 | 11 |
| 28 | ಮೈಸೂರು | 0 | 2 |
| 29 | ರಾಯಚೂರು | 2 | 12 |
| 30 | ರಾಮನಗರ | 0 | 1 |

## ಅನುಬಂಧ

| ಕ್ರ.ಸಂ | ಜಿಲ್ಲೆಯ ಹೆಸರು | ಮಕ್ಕಳ ಸಂಖ್ಯೆ | |
|---|---|---|---|
| | | 05 ರಿಂದ 10 ವರ್ಷಗಳ ಅನಾಥ ಮಕ್ಕಳು ಒಟ್ಟು | 10 ರಿಂದ 15 ವರ್ಷಗಳ ಅನಾಥ ಮಕ್ಕಳುಒಟ್ಟು |
| **1** | **2** | **3** | **4** |
| 31 | ಶಿವಮೊಗ್ಗ | 0 | 0 |
| 32 | ತುಮಕೂರು | 2 | 3 |
| 33 | ಉಡುಪಿ | 0 | 0 |
| 34 | ಯಾದಗಿರಿ | 0 | 0 |
| 35 | ವಿಜಯನಗರ | 0 | 0 |
| | **ಒಟ್ಟು** | **76** | **199** |

# ಅನುಬಂಧ -2

| ಅನಾಥ ಮಕ್ಕಳ ವಿವರ | | | |
|---|---|---|---|
| ಕ್ರ.ಸಂ | ಜಿಲ್ಲೆಗಳು | 0 ರಿಂದ 5 ವರ್ಷದೊಳಗಿನ ಅನಾಥ ಮಕ್ಕಳ ಸಂಖ್ಯೆ | ಕಳೆದ 2 ವರ್ಷಗಳಲ್ಲಿ ನೀಡಲಾದ ಒಟ್ಟು ಅನಾಥ ಮಕ್ಕಳ ದತ್ತು ಸಂಖ್ಯೆ |
| 1 | ಬಾಗಲಕೋಟೆ | 2 | 7 |
| 2 | ಬೆಂಗಳೂರು(ಗ್ರಾ) | 3 | 7 |
| 3 | ಬೆಂಗಳೂರು ನಗರ(ಪೂರ್ವ) | 6 | 5 |
| | ಬೆಂಗಳೂರು ನಗರ(ಪಶ್ಚಿಮ) | 0 | 0 |
| | ಬೆಂಗಳೂರು ನಗರ(ಉತ್ತರ) | 0 | 0 |
| | ಬೆಂಗಳೂರು ನಗರ(ದಕ್ಷಿಣ) | 0 | 0 |
| | ಬೆಂಗಳೂರು ನಗರ | 2 | 0 |
| 4 | ಬೆಳಗಾವಿ | 2 | 0 |
| 5 | ಬಳ್ಳಾರಿ | 0 | 4 |
| 6 | ಬೀದರ್ | 1 | 0 |
| 7 | ವಿಜಯಪುರ | 0 | 0 |
| 8 | ಚಾಮರಾಜನಗರ | 0 | 0 |
| 9 | ಚಿಕ್ಕಬಳ್ಳಾಪುರ | 0 | 1 |
| 10 | ಚಿಕ್ಕಮಗಳೂರು | 0 | 1 |
| 11 | ಚಿತ್ರದುರ್ಗ | 3 | 0 |
| 12 | ದಾವಣಗೆರೆ | 1 | 0 |
| 13 | ಧಾರವಾಡ | 0 | 0 |
| 14 | ಗದಗ | 0 | 0 |
| 15 | ಕಲ್ಬುರ್ಗಿ | 0 | 2 |
| 16 | ಹಾಸನ | 1 | 11 |
| 17 | ಹಾವೇರಿ | 0 | 0 |
| 18 | ಉತ್ತರ ಕನ್ನಡ | 1 | 0 |
| 19 | ಕೊಡಗು | 0 | 0 |
| 20 | ಕೋಲಾರ | 0 | 0 |
| 21 | ಕೊಪ್ಪಳ | 0 | 0 |
| 22 | ಮಂಡ್ಯ | 0 | 3 |
| 23 | ದಕ್ಷಿಣಕನ್ನಡ | 0 | 0 |
| 24 | ಮೈಸೂರು | 0 | 0 |
| 25 | ರಾಯಚೂರು | 3 | 2 |
| 26 | ರಾಮನಗರ | 0 | 0 |
| 27 | ಶಿವಮೊಗ್ಗ | 0 | 1 |
| 28 | ತುಮಕೂರು | 0 | 0 |
| 29 | ಉಡುಪಿ | 0 | 0 |
| 30 | ಯಾದಗಿರಿ | 0 | 0 |
| 31 | ವಿಜಯನಗರ | 0 | 0 |
| ಒಟ್ಟು | | 25 | 44 |